

‘ವ್ಯೋಮಾವ್ಯೋಮ’ದ ಬಿಡುಗಡೆ ಸಂದರ್ಭದಲ್ಲಿ ಚೆನ್ನಣ್ಣನವರೊಂದಿಗೆ ಬಸವರಾಜ ಕಲ್ಗುಡಿ, ಬರಗೂರು ರಾಮಚಂದ್ರಪ್ಪ ಹಾಗೂ ಸಿ.ಎನ್. ರಾಮಚಂದ್ರನ್

ರೂಪಾಯಿ ಖರ್ಚು ಮಾಡಿ ತಮ್ಮ ಪರಿಚಯದವರಿಗೆಲ್ಲ ಅಂಚೆ ಮೂಲಕ ತಲುಪಿಸಿದ್ದರು. ಸಾವಿರಕ್ಕೂ ಮಿಕ್ಕಿದ ಪುಟಗಳ ಈ ಕೃತಿ ಅಂಚೆ ಇಲಾಖೆಗೂ ಒಂದು ಸವಾಲಾಗಿ ಪರಿಣಮಿಸಿತ್ತು. ಚಂಪಾ ಅವರು ಈ ಕೃತಿಯ ಬಗ್ಗೆ ‘ಸಂಕ್ರಮಣ’ದಲ್ಲಿ ದೀರ್ಘವಾದ ‘ಚಂಪಾ ಕಾಲಂ’ ಬರೆದರು. ಬರಗೂರು ರಾಮಚಂದ್ರಪ್ಪನವರು ‘ಪ್ರಜಾವಾಣಿ’ ಪತ್ರಿಕೆಯ ‘ಮುಕ್ತಛಂದ’ ಪುರವಣಿಯಲ್ಲಿ ವಿಶೇಷ ಲೇಖನ ಪ್ರಕಟಿಸಿದರು. ಮುಂದೆ ಈ ಕೃತಿ ಕುರಿತ ಲೇಖನಗಳ ಸಂಗ್ರಹ ಕೂಡ ಹೊರಬಂತು. ಬರಗೂರರು ಬರೆದಾಗಲಂತೂ ವಾಲೀಕಾರರ ಸಂತೋಷ ಇಮ್ಮಡಿಸಿತ್ತು. ಬಂದವರಿಗೆಲ್ಲ ಅದನ್ನು ತೋರಿಸುತ್ತಿದ್ದರು. ನಾನು ಹೋದಾಗ ‘ನನ್ನ ತಮ್ಮ ಬರಗೂರು ಬರೆದಿದ್ದನ್ನು ಓದಿರುವೆಯಾ?’ ಅಂತ ಕೇಳಿದರು. ‘ಓದಿರುವೆ ಸರ್’ ಎಂದೆ. ಕೊಂಚ ಭಾವುಕರಾಗಿ ನನ್ನೆಡೆಗೆ ನೋಡಿ, ‘ಆತ ಸಾಹಿತ್ಯ ಲೋಕದ ವಾಲ್ಮೀಕಿ, ನಾನು ವ್ಯಾಸ’ ಎಂದು ಹೇಳಿ ತಮ್ಮದೇ ಧಾಟಿಯಲ್ಲಿ ನಕ್ಕರು. ಕೆಲ ತಿಂಗಳ ತರುವಾಯ ಅವರದೊಂದು ಫೋನ್ ಬಂತು. ತಾನೀಗ ‘ವ್ಯೋಮಾವ್ಯೋಮ’ದ ಎರಡನೇ ಭಾಗ ಬರೆಯುತ್ತಿರುವುದಾಗಿ ಹೇಳಿದರು. ನನಗೆ ಗಾಬರಿಯಾಯಿತು. ‘ಬೇಡ ಸರ್. ಆರೋಗ್ಯದ ಕಡೆ ಗಮನ ಕೊಡಿ. ಬೇಕಾದರೆ ಆತ್ಮಕತೆ ಬರೆಯಿರಿ’ ಎಂದೆ. ಆದರೆ ಅವರ ಮನಸ್ಸು ಮಹಾಕಾವ್ಯಕ್ಕೆ ಜಾರಿಕೊಂಡಿತ್ತು. ಮರೆತುಹೋಗಬಾರದೆಂದು ಓದುವ ಕೋಣೆಯ ಗೋಡೆಯಲ್ಲಿ ಚಾಪೀಸಿನಿಂದ ಅದರ ಹೆಸರು ಕೂಡ ನಮೂದಿಸಿದ್ದರು. ಎರಡನೆಯ ಮಹಾಕಾವ್ಯದ ಹೆಸರು ‘ಆತ್ಮ ಅನಾತ್ಮ’ ಎಂದಾಗಿತ್ತು. ಆದರೆ ಇದು ಪೂರ್ಣಗೊಳ್ಳಲಿಲ್ಲ. ಆತ್ಮಕತೆಯನ್ನೂ ಬರೆದರು. ಅದೂ ಅಪೂರ್ಣ. ಇನ್ನೂ ಪ್ರಕಟವಾಗಿಲ್ಲ. ಅದರ ಹೆಸರು ‘ಬಂಡೆಯ ಮೇಲೆ ಚಿಗುರಿದ ಬದುಕು’.

ವಾಲೀಕಾರರು ಅನೇಕ ಗದ್ಯ ಕೃತಿಗಳನ್ನೂ ಬರೆದಿರುವರು. ಕಾವ್ಯದಂತೆಯೇ ಅವರ ಕಥೆಗಳಲ್ಲೂ ಬಡತನದ ವಿವಿಧ ಮಗ್ಗುಲುಗಳಿವೆ. ‘ಬುದ್ಧನ ನಾಡಿನಲ್ಲಿ’ ಕಥೆಯ ಹಂದರ ರಾಂಚಿಯದ್ದು. ಕಥೆಯ